## SITE INSPECTION REPORT

On 03.11.2019 I have inspected the proposed site for the project "Construction of the 110KV S/C line on DC towers from the existing 110/11KV sub-station at Thogarshi to the proposed 110/11KV sub-station at kuppagadde in soraba taluk, shivamogga district, along with Assistant Conservator of Forests, shikaripura sub division, shikaripura, Range Forest Officer shiralkoppa Range, field staffs Assistant Executive Engineer KPTCL and Assistant Engineer, KPTCL shivamogga.

The user agency is requesting for the permission to construct 110KV S/C line on DC towers from the existing 110/11KV sub-station at Thogarshi to the proposed 110/11KV sub-station at kuppagadde. According to survey report of this project, an area of 6.073Ha having length of 2760.88mtr will run in forest area in Sy No 40 of Gudaginakoppa village and Sy No 164, 103 of udri village, the entire proposed area is in Udri SF.

In the proposed area the natural forest is degraded, 3/4$^{th}$ of the proposed land area is cultivated by villagers and all have applied in The Scheduled Tribes and Other Traditional Forest Dwellers Act, 2006 for title and the remaining area is having natural vegetation.

During inspection the user agency has promised that they will not damage any vegetation other than proposed area. So there will be not much damage to surrounding forest area except the proposed area for diversion.

The project is found to be essential for the surrounding villagers to meet their fundamental needs.

Hence the proposal for " Construction of the 110KV S/C line on DC towers from the existing 110/11KV sub-station at Thogarshi to the proposed 110/11KV sub-station at kuppagadde in soraba taluk, shivamogga district can be considered.

Deputy Conservator of Forests

Sagar Division, sagar

Scanned by CamScanner

ಕರ್ನಾಟಕ ಅರಣ್ಯ ಇಲಾಖೆ

"ಪ್ಲಾಸ್ಟಿಕ್ ಬಳಸಬೇಡಿ"

**ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಗರ ಅರಣ್ಯ ವಿಭಾಗ, ಸಾಗರ – 577401**

**Office of the Deputy Conservator of Forests, Sagar Forest Division, Sagar– 577401**

**Phone No. : 08183 226071** **Email :** Sagardcf@rediffmail.com

ಕ್ರ: ಬಿ1/ಭೂಮಿ/ಎಫ್.ಸಿ./ಜಿಎಲ್–1190/2019–20 ಸಾಗರ. ದಿ: 22.11.2019.

ಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
ಶಿವಮೊಗ್ಗ ವೃತ್ತ, ಶಿವಮೊಗ್ಗ

**ಮಾನ್ಯರೇ,**

ವಿಷಯ:– ಶಿವಮೊಗ್ಗ ಜಿಲ್ಲೆ, ಸೊರಬ ತಾ|| ಕುಪ್ಪಗಡ್ಡೆ ಗ್ರಾಮ ಪಂಚಾಯತ್ ಖಾನೇಷುಮಾರಿ ನಂ.316ರಲ್ಲಿ ಕವಿಪ್ರನಿನಿ ಬೃಹತ್ ಕಾಮಗಾರಿ ವಿಭಾಗದಿಂದ 1X10 ಎಂವಿಎ, 110/11ಕೆವಿ ವಿದ್ಯುತ್ ಉಪಕೇಂದ್ರವನ್ನು ನಿರ್ಮಾಣ ಮಾಡಲು 110 ಕೆವಿ ಮಾರ್ಗವು ಅರಣ್ಯ ಭೂಮಿಯಲ್ಲಿ ಹಾದೂ ಹೋಗುವ ಪ್ರದೇಶದ ವಿವರವನ್ನು ನೀಡವ ಕುರಿತು.

ಉಲ್ಲೇಖ:–
1. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೃಹತ್ ಕಾಮಗಾರಿ ಉಪವಿಭಾಗ–1, ಕ.ವಿ.ಪ್ರ.ನಿ.ನಿ., ಬಾಲ್‌ರಾಜ್ ಅರಸ್ ರಸ್ತೆ, ಶಿವಮೊಗ್ಗ ರವರ ಕಛೇರಿ ಪತ್ರ ಸಂಖ್ಯೆ:ಸಕಾನಿಇಂ(ವಿ)/ಬೃಕಾಉವಿ–1/ಶಿ/2018–19/1018–24 ದಿ: 19–06–2018.
2. ಈ ಕಛೇರಿ ಪತ್ರ ಸಂಖ್ಯೆ ಬಿ1/ಲ್ಯಾಂಡ್/110/11ಕೆವಿ/ಜಿ.ಎಲ್.–1579/2018–19 ದಿ.28.07.2018.
3. ವಲಯ ಅರಣ್ಯಾಧಿಕಾರಿ, ಶಿರಾಳಕೊಪ್ಪ ವಲಯ, ಶಿರಾಳಕೊಪ್ಪ ಇವರ ಕಛೇರಿ ಪತ್ರ ಸಂ.216/18–19 ದಿ.27.08.2018.
4. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿಕಾರಿಪುರ ವಿಭಾಗ, ಶಿಕಾರಿಪುರ ಇವರ ಕಛೇರಿ ಪತ್ರ ಸಂ.236/18–19 ದಿ.04.09.2018.
5. ಈ ಕಛೇರಿ ಪತ್ರ ಸಂಖ್ಯೆ. ಬಿ1/ಲ್ಯಾಂಡ್/110/11ಕೆವಿ/ಜಿ.ಎಲ್.–1579/2018–19 ದಿ.23.10.2018.
6. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೃಹತ್ ಕಾಮಗಾರಿ ಉಪವಿಭಾಗ–1, ಕ.ವಿ.ಪ್ರ.ನಿ.ನಿ., ಬಾಲ್‌ರಾಜ್ ಅರಸ್ ರಸ್ತೆ, ಶಿವಮೊಗ್ಗ ರವರ ಕಛೇರಿ ಪತ್ರ ಸಂಖ್ಯೆ:ಸಕಾನಿಇಂ(ವಿ)/ಬೃಕಾಉವಿ–1/ಶಿ/2019–20/95–120 ದಿ: 06.06.2019.
7. ಈ ಕಛೇರಿ ಪತ್ರ ಸಮ ಸಂಖ್ಯೆ ದಿ.11.06.2019.
8. ವಲಯ ಅರಣ್ಯಾಧಿಕಾರಿ, ಶಿರಾಳಕೊಪ್ಪ ವಲಯ, ಶಿರಾಳಕೊಪ್ಪ ಇವರ ಕಛೇರಿ ಪತ್ರ ಸಂ.305/19–20 ದಿ.31.08.2019.
9. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿಕಾರಿಪುರ ವಿಭಾಗ, ಶಿಕಾರಿಪುರ ಇವರ ಕಛೇರಿ ಪತ್ರ ಸಂ.406/19–20 ದಿ.10.10.2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶಿವಮೊಗ್ಗ ಜಿಲ್ಲೆ, ಸೊರಬ ತಾ|| ಕುಪ್ಪಗಡ್ಡೆ ಗ್ರಾಮ ಪಂಚಾಯತ್ ಖಾನೇಷುಮಾರಿ ನಂ.316ರಲ್ಲಿ ಕವಿಪ್ರನಿನಿ ಬೃಹತ್ ಕಾಮಗಾರಿ ವಿಭಾಗದಿಂದ 1X10 ಎಂವಿಎ, 110/11ಕೆವಿ ವಿದ್ಯುತ್ ಉಪಕೇಂದ್ರವನ್ನು ನಿರ್ಮಾಣ ಮಾಡಲು 110 ಕೆವಿ ಮಾರ್ಗವು ತೊಗರ್ಸಿ ವಿದ್ಯುತ್ ಉಪಕೇಂದ್ರದಿಂದ ಜೋಡಣೆಯಾಗಿ ಕಾನಕೊಪ್ಪ, ಚಿಕ್ಕಬ್ಬೂರು, ಗುಡುಗಿನಕೊಪ್ಪ, ಬಿದರಗೆರೆ ಹಾಗೂ ಕುಮ್ರಿ ಗ್ರಾಮಗಳ ಸರಹದ್ದಿನ ಮುಖಾಂತರ ಹಾದು ಹೋಗಿ ಉದ್ದೇಶಿತ ಕುಪ್ಪಗಡ್ಡೆ 1X10 ಎಂವಿಎ, 110/11ಕೆವಿ ವಿದ್ಯುತ್ ಉಪ ಕೇಂದ್ರಕ್ಕೆ ಸಂಪರ್ಕಿಸಲು ಉದ್ದೇಶಿತ ಪ್ರದೇಶದಲ್ಲಿ ಪ್ರಸ್ತುತ ಕಾಮಗಾರಿಗೆ 11.648 ಕಿ,ಮೀ



Scanned by CamScanner

ಉದ್ದದ ಸಂಪರ್ಕ ಕಲ್ಪಿಸುವ 110 ಕೆವಿ ಮಾರ್ಗವನ್ನು 22 ಮೀ ಅಗಲ ಅನ್ವಯಿಸುವಂತೆ ಮೆ॥ ಕರ್ನಾಟಕ ಸಮೀಕ್ಷಕರು, ಬೆಂಗಳೂರು ಇವರು ಸರ್ವೆ ಮಾಡಿದ್ದು, ಸದರಿಯವರ ವರದಿ ಪ್ರಕಾರ ಸ.ನಂ.40 ಹಾಗೂ 164ರಲ್ಲಿ ಸುಮಾರು 240 ಮೀಟರ್ ನಷ್ಟು ಉದ್ದದ ಅರಣ್ಯ ಪ್ರದೇಶದಲ್ಲಿ ಉದ್ದೇಶಿತ ಕೆವಿ ಲೈನ್ ಮಾರ್ಗವು ಹಾದು ಹೋಗುತ್ತಿದ್ದು, ಈ ಬಗ್ಗೆ ಅರಣ್ಯ ಇಲಾಖಾ ಅಧಿನ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ ಮಾಡಿಸಿ, ನಿಖರವಾದ ಅರಣ್ಯಪ್ರದೇಶದ ವಿವರವನ್ನು ನೀಡಲು ಉಲ್ಲೇಖಿತ(1)ರಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೃಹತ್ ಕಾಮಗಾರಿ ಉಪವಿಭಾಗ-1, ಕ.ವಿ.ಪ್ರ.ನಿ.ನಿ., ಶಿವಮೊಗ್ಗ ಇವರು ಕೋರಿರುತ್ತಾರೆ.

ಮುಂದುವರೆದು ಪ್ರಸ್ತಾಪಿತ ಪ್ರದೇಶದ ಸ್ಥಳ ಪರಿಶೀಲಿಸಿ, ಉದ್ದೇಶಿತ ಕಾಮಗಾರಿ ಕೈಗೊಳ್ಳುವ ಬಗ್ಗೆ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ನೀಡುವ ಕುರಿತು ಸ್ಪಷ್ಟ ವರದಿಯನ್ನು ಸಲ್ಲಿಸಲು ಉಲ್ಲೇಖಿತ(2)ರಲ್ಲಿ ವಲಯ ಅರಣ್ಯಾಧಿಕಾರಿ, ಶಿರಾಳಕೊಪ್ಪ ಇವರಿಗೆ ಸೂಚಿಸಿದಂತೆ ಸಂಬಂಧಪಟ್ಟ ಶಾಖೆಯ ಉಪವಲಯ ಅರಣ್ಯಾಧಿಕಾರಿ ಹಾಗೂ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಇಲಾಖೆಯವರೊಂದಿಗೆ ಜಂಟಿ ಸ್ಥಳ ಪರಿಶೀಲಿಸಿ ವರದಿ ನೀಡಿರುವ ಪ್ರಕಾರ, ಉದ್ದೇಶಿತ ಪ್ರದೇಶವು ಉದ್ರಿ ರಾಜ್ಯ ಅರಣ್ಯದ ಗುಡಗಿನಕೊಪ್ಪ ಸರ್ವೆ ನಂ.40 ರಲ್ಲಿ 300 ಮೀಟರ್, ಉದ್ರಿ ಸರ್ವೆ ನಂ. 164ರಲ್ಲಿ 2000 ಮೀಟರ್ ಹಾಗೂ ಉದ್ರಿ ಸರ್ವೆ ನಂ.103 ರಲ್ಲಿ 700 ಮೀಟರ್ ಪ್ರದೇಶದಲ್ಲಿ ವಿದ್ಯುತ್ ಲೈನ್ ಹಾದುಹೋಗುತ್ತಿರುವುದಾಗಿ ಉಲ್ಲೇಖಿತ(3)ರಲ್ಲಿ ವಲಯ ಅರಣ್ಯಾಧಿಕಾರಿ, ಶಿರಾಳಕೊಪ್ಪ ವಲಯ, ಶಿರಾಳಕೊಪ್ಪ ಇವರು ವರದಿಯನ್ನು ಸಲ್ಲಿಸುತ್ತಾ, ಸದರಿ ಲೈನ್ ಹಾದುಹೋಗುವ ಮಾರ್ಗದಲ್ಲಿ ಬರುವ ಮರಗಳ ಅಳತೆಪಟ್ಟಿ ಮತ್ತು ಜಿಪಿಎಸ್ ನಕಾಶೆಯನ್ನು ನೀಡಿರುತ್ತಾರೆ.

ಮೇಲ್ಕಂಡಂತೆ ವಲಯ ಅರಣ್ಯಾಧಿಕಾರಿ, ಶಿರಾಳಕೊಪ್ಪ ವಲಯ, ಶಿರಾಳಕೊಪ್ಪ ಇವರು ನೀಡಿರುವ ವರದಿಯನುಸಾರ, ಉದ್ದೇಶಿತ ಪ್ರದೇಶವು ಉದ್ರಿ ರಾಜ್ಯ ಅರಣ್ಯದ ಗುಡಗಿನಕೊಪ್ಪ ಸರ್ವೆ ನಂ.40 ರಲ್ಲಿ 300 ಮೀಟರ್, ಉದ್ರಿ ಸರ್ವೆ ನಂ. 164ರಲ್ಲಿ 2000 ಮೀಟರ್ ಹಾಗೂ ಉದ್ರಿ ಸರ್ವೆ ನಂ.103 ರಲ್ಲಿ 700 ಮೀಟರ್ ಪ್ರದೇಶದಲ್ಲಿ ವಿದ್ಯುತ್ ಲೈನ್ ಹಾದುಹೋಗುತ್ತಿದ್ದು, ಪ್ರಸ್ತಾಪಿತ ಅರಣ್ಯ ಪ್ರದೇಶದಲ್ಲಿ ಮೇಲ್ಕಂಡ ಕಾಮಗಾರಿಗಳನ್ನು ಕೈಗೊಳ್ಳುವ ಪೂರ್ವದಲ್ಲಿ ಅರಣ್ಯ ಸಂರಕ್ಷಣಾ ಕಾಯಿದೆ -1980 ರ ಪ್ರಕಾರ ಭಾರತ ಸರ್ಕಾರದ ಅನುಮತಿಯನ್ನು ಪಡೆಯಬೇಕಾಗಿರುತ್ತದೆ ಎಂಬುದಾಗಿ ಉಲ್ಲೇಖಿತ(5)ರ ಈ ಕಛೇರಿ ಪತ್ರದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೃಹತ್ ಕಾಮಗಾರಿ ಉಪವಿಭಾಗ-1, ಕ.ವಿ.ಪ್ರ.ನಿ.ನಿ., ಶಿವಮೊಗ್ಗ ರವರಿಗೆ ಅಭಿಪ್ರಾಯವನ್ನು ನೀಡಲಾಗಿರುತ್ತದೆ.

ಆ ಪ್ರಕಾರ ಉಪಯೋಗಿ ಸಂಸ್ಥೆಯವರು ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಸೆಕ್ಷನ್-2ರ ಪ್ರಕಾರ ಪ್ರಸ್ತಾವನೆಯನ್ನು www.forestclearance.nic.in ಅಂತರಜಾಲದಲ್ಲಿ ಸಲ್ಲಿಸಿದ್ದು, ಪ್ರಸ್ತಾವನೆ ಸಂಖ್ಯೆ FP/KA/TRANS/38788/2019 ಆಗಿರುತ್ತದೆ. ಸದರಿ ಪ್ರಸ್ತಾವನೆಯ 08 ಸೆಟ್‌ಗಳನ್ನು ಉಲ್ಲೇಖಿತ(6)ರಲ್ಲಿ ಈ ಕಛೇರಿಗೆ ಸಲ್ಲಿಸುತ್ತಾ, ಉದ್ದೇಶಿತ ಕಾಮಗಾರಿ ಕೈಗೊಳ್ಳಲು 6.073 ಹೆಕ್ಟೇರ್ ಅರಣ್ಯಪ್ರದೇಶವನ್ನು ಬಿಡುಗಡೆ ಮಾಡುವ ಬಗ್ಗೆ ಕೋರಿರುತ್ತಾರೆ. ಸದರಿ ಪ್ರಸ್ತಾವನೆಯ ಹಾರ್ಡ್ ಕಾಪಿಯನ್ನು ಉಲ್ಲೇಖಿತ(7)ರಲ್ಲಿ ವಲಯ ಅರಣ್ಯಾಧಿಕಾರಿ, ಶಿರಾಳಕೊಪ್ಪ ವಲಯ ಇವರಿಗೆ ಕಳುಹಿಸುತ್ತಾ, ದಾಖಲಾತಿಗಳ ಪ್ರಕಾರ ಸ್ಥಳ ಪರಿಶೀಲಿಸಿ, ಮಹಜರ್ ಕ್ರಮ ಕೈಗೊಂಡು ಅರಣ್ಯ ಭೂಮಿ ಬಿಡುಗಡೆ ಕುರಿತು ಸ್ಪಷ್ಟ ಅಭಿಪ್ರಾಯವನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇವರ ಮುಖಾಂತರ ಸಲ್ಲಿಸಲು ಸೂಚಿಸಲಾಗಿರುತ್ತದೆ. ಆ ಪ್ರಕಾರ ಉಲ್ಲೇಖಿತ(8) ಮತ್ತು (9)ರಲ್ಲಿ ವಲಯ ಅರಣ್ಯಾಧಿಕಾರಿ ಇವರು ವರದಿ ಸಲ್ಲಿಸಿರುವ ಮೇರೆಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇವರು ದಿ.25.09.2019 ರಂದು ಸ್ಥಳ ಪರಿಶೀಲಿಸಿ, ಅರಣ್ಯ ಭೂಮಿ ಬಿಡುಗಡೆ ಕುರಿತು ಈ ಕೆಳಕಂಡಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

- ದಾಖಲಾತಿಗಳೊಂದಿಗೆ ಸ್ಥಳ ಪರಿಶೀಲಿಸಿ, ನೋಡಲಾಗಿ ಉದ್ದೇಶಿತ ಕಾಮಗಾರಿಯ ಸ್ಥಳವು ಉದ್ರಿ ಸರ್ವೆ ನಂ.164, 103 ಹಾಗೂ ಗುಡಗಿನಕೊಪ್ಪ ಸರ್ವೆ ನಂ.40 ಆಗಿದ್ದು, ಈ ಪ್ರದೇಶಗಳು ಉದ್ರಿ ರಾಜ್ಯ ಅರಣ್ಯದಲ್ಲಿ ಬರುತ್ತಿದ್ದು, ಅಧಿಸೂಚನೆ ಸಂ. R.5704-FT.121-18 DATE.15-11-1919 ಆಗಿರುತ್ತದೆ.
- ಅನುಮೋದನೆಗಾಗಿ ನೀಡಿದ ನಕಾಶೆಗಳ ಪ್ರಕಾರ ಪರಿಶೀಲಿಸಲಾಗಿ ಒಟ್ಟು 2760.58 ಮೀ. ಉದ್ದ ಇರುವುದು ಕಂಡುಬಂದಿದ್ದು, ಈ ಪ್ರದೇಶದ ಪೈಕಿ ಸುಮಾರು 245 ಮೀ. ಉದ್ದ ಮತ್ತು 25 ಮೀ. ಅಗಲದಲ್ಲಿ ನೈಸರ್ಗಿಕ ಕಾಡು ಬೆಳೆದಿರುತ್ತದೆ.
- ಸದರಿ ಅರಣ್ಯ ಪ್ರದೇಶದ ಪ್ರಸರಣ ಸ್ಥಳದಿಂದ ಹಾದುಹೋಗುವ ಪ್ರಸ್ತಾಪಿತ ದಾರಿಯಲ್ಲಿ ಉದ್ರಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ 57 ಜನ ಅರಣ್ಯ ಹಕ್ಕು ಸಮಿತಿಯಡಿಯಲ್ಲಿ ಅರಣ್ಯ ಜಮೀನಿನ ಮಂಜೂರಾತಿಗಾಗಿ ಕ್ಲೇಮು ಹಾಕಿಕೊಂಡಿದ್ದು, ಅರ್ಜಿಗಳು ವಿಲೇವಾರಿಗೆ ಬಾಕಿಯಿರುತ್ತದೆ.



Scanned by CamScanner

- ಗುಡುಗಿನಕೊಪ್ಪ ಸರ್ವೆ ನಂ.40 ರಲ್ಲಿ 301.44 ಮೀಟರ್ ಉದ್ದ ಹಾಗೂ 22 ಮೀಟರ್ ಅಗಲದಲ್ಲಿ ಹಾಗೂ ಉದ್ರಿ ಸರ್ವೆ ನಂ.164 ರಲ್ಲಿ 1490.93 ಮೀ. ಉದ್ದ ಮತ್ತು 22 ಮೀಟರ್‌ನಷ್ಟು ಅಗಲದಲ್ಲಿ ಮತ್ತು ಉದ್ರಿ ಸರ್ವೆ ನಂ.103 ರಲ್ಲಿ 547.29 ಮೀ. ಉದ್ದ ಮತ್ತು 22 ಮೀಟರ್ ಅಗಲದಲ್ಲಿ ವಿದ್ಯುತ್ ಲೈನ್ ಪ್ರಸರಣ ಕಾಮಗಾರಿ ಕೈಗೊಳ್ಳಲಿದ್ದು, ಒಟ್ಟು 6.073 ಹೆಕ್ಟೇರ್ ನಷ್ಟು ಅರಣ್ಯಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕಾಗಿ, ಮೂಲಭೂತ ಸೌಕರ್ಯಗಳಡಿ ಸಾರ್ವಜನಿಕ ಉದ್ದೇಶದ ಬಳಕೆಗೆ ಬಿಡುಗಡೆ ಮಾಡುವುದು ಅನಿವಾರ್ಯವಾಗಿರುತ್ತದೆ.
- ಸದರಿ ಪ್ರಸ್ತಾಪಿತ ವಿದ್ಯುತ್ ಮಾರ್ಗಕ್ಕೆ ಕಡಿಮೆ ಅರಣ್ಯಪ್ರದೇಶ ಬಳಕೆಯಾಗುವುದರಿಂದ ಈ ಬಗ್ಗೆ ಕರ್ನಾಟಕ ಸರ್ವೆಯರ್ ಏಜೆನ್ಸಿರವರು ಪ್ರಸ್ತಾವನೆಯಲ್ಲಿ ನೀಡಿದ ವರದಿಯು ಸರಿಯಿರುತ್ತದೆ.
- ಸದರಿ ಅರಣ್ಯ ಪ್ರದೇಶದಲ್ಲಿ ಸಾಗರ ವಿಭಾಗದ 2011-12 ರಿಂದ 2020-21 ರವರೆಗೆ ಕಾರ್ಯಯೋಜನೆಯಲ್ಲಿ ಇರುವಂತೆ Chapter II the Forest Flora section-1 Composition and condition of the crop ರ ಅಡಿಯಲ್ಲಿ ನಮೂದಿಸಿದಂತೆ, Southern tropical moist deciduous forest (3B/C2) ರಂತೆ ಅರಣ್ಯ ಲಕ್ಷಣಗಳಿರುವುದು ಈ ಪ್ರದೇಶದಲ್ಲಿ ಹೊನ್ನೆ, ಸಾಗುವಾನಿ, ಮತ್ತಿ, ಹುನಾಲು, ಜಂಬೆ, ತುಮರಿ, ಬೀಟೆ, ಹಸಿರುಗೊನೆ, ಬಿದಿರು ಜಾತಿ ಮರಗಳು ಇದ್ದು, ಸದರಿ ಪ್ರದೇಶವು ಇಳಿಜಾರಿನಿಂದ ಕೂಡಿದ ಸಮತಟ್ಟಾದ ಪ್ರದೇಶವಾಗಿರುತ್ತದೆ.
- ಉದ್ದೇಶಿತ 110 ಕೆವಿ ವಿದ್ಯುತ್ ಪ್ರಸರಣ ಮಾರ್ಗ ರಚನೆಯ ಕಾಮಗಾರಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿ., ಶಿವಮೊಗ್ಗ ಇವರು ಕೋರಿರುವಂತೆ ಒಟ್ಟು 6.073 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಅರಣ್ಯ ಸಂರಕ್ಷಣಾ ಕಾಯ್ದೆಯಡಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬಹುದಾಗಿರುತ್ತದೆ.

ನಾನು ಸಹ ದಿ.03.11.2019 ರಂದು ಸ್ಥಳ ಪರಿಶೀಲನೆ ಕೈಗೊಂಡಿದ್ದು, ಉದ್ದೇಶಿತ 110 ಕೆವಿ ವಿದ್ಯುತ್ ಪ್ರಸರಣ ಮಾರ್ಗದ ಕಾಮಗಾರಿ ಸಂಬಂಧ ಗುಡುಗಿನಕೊಪ್ಪ ಸರ್ವೆ ನಂ.40 ರಲ್ಲಿ 301.44 ಮೀಟರ್ ಉದ್ದ ಹಾಗೂ 22 ಮೀಟರ್ ಅಗಲದಲ್ಲಿ ಹಾಗೂ ಉದ್ರಿ ಸರ್ವೆ ನಂ.164 ರಲ್ಲಿ 1490.93 ಮೀ. ಉದ್ದ ಮತ್ತು 22 ಮೀಟರ್‌ನಷ್ಟು ಅಗಲದಲ್ಲಿ ಮತ್ತು ಉದ್ರಿ ಸರ್ವೆ ನಂ.103 ರಲ್ಲಿ 547.29 ಮೀ. ಉದ್ದ ಮತ್ತು 22 ಮೀಟರ್ ಅಗಲದಲ್ಲಿ ವಿದ್ಯುತ್ ಲೈನ್ ಪ್ರಸರಣ ಕಾಮಗಾರಿ ಕೈಗೊಳ್ಳಲಿದ್ದು, ಒಟ್ಟು 6.073 ಹೆಕ್ಟೇರ್ ನಷ್ಟು ಅರಣ್ಯ ಪ್ರದೇಶ ಅವಶ್ಯಕತೆ ಇದ್ದು, ಅಲ್ಲದೇ ವಲಯ ಅರಣ್ಯಾಧಿಕಾರಿ, ಶಿರಾಳಕೊಪ್ಪ ವಲಯ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶಿಕಾರಿಪುರ ಉಪವಿಭಾಗ ರವರುಗಳು ಮೇಲ್ಕಂಡಂತೆ ಸಲ್ಲಿಸಿರುವ ವರದಿಯು ಸರಿಯಿದ್ದು, ನಾನು ಸಹ ಅನುಮೋದಿಸುತ್ತಾ, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೃಹತ್ ಕಾಮಗಾರಿ ಉಪವಿಭಾಗ-1, ಕ.ವಿ.ಪ್ರ.ನಿ.ನಿ., ಬಾಲ್‌ರಾಜ್ ಅರಸ್ ರಸ್ತೆ, ಶಿವಮೊಗ್ಗ ಇವರಿಗೆ 6.073 ಹೆಕ್ಟೇರ್ ಅರಣ್ಯ ಭೂಮಿಯನ್ನು ಅರಣ್ಯೇತರ ಪ್ರದೇಶಕ್ಕೆ ಉಪಯೋಗಿಸಿಕೊಳ್ಳಲು ಅನುಮತಿ ನೀಡಬಹುದಾಗಿ ಅಭಿಪ್ರಾಯವನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಿದ್ದೇನೆ.

ತಮ್ಮ ನಂಬುಗೆಯ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಸಾಗರ ವಿಭಾಗ, ಸಾಗರ.



Scanned by CamScanner